ಆ) ಹಾಗಿದ್ದಲ್ಲಿ, 1992–93ನೇ ಸಾಲಿನಲ್ಲಿ ಆದ್ಯತೆ ಮೇಲೆ ಮಂಜೂರಾತಿಯನ್ನು ನೀಡಲಾಗುವುದೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಬಂದಿದೆ

ಆ) ಇಲ್ಲ

ಶಿರಾ ತಾಲ್ಲೂಕು ಕಳ್ಳಂಬೆಳ್ಳದಲ್ಲಿ ಹೆರಿಗೆ ಆಸ್ಪತ್ರೆಯ ಮಂಜೂರಾತಿಗೆ ಒತ್ತಾಯ.

110 (594) ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿರಾ ತಾಲ್ಲೂಕು ಕಳ್ಳಂಬೆಳ್ಳದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವು ಅತಿ ಹೆಚ್ಚಿನ ಪ್ರದೇಶವನ್ನೊಳಗೊಂಡಿದ್ದು ಹೆರಿಗೆ ಆಸ್ಪತ್ರೆಯು ಅತ್ಯವಶ್ಯಕವಾಗಿ ಬೇಕಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹೆರಿಗೆ ಆಸ್ಪತ್ರೆಗೆ ಮೂಲತಃ ಬೇಕಾಗುವ ವಸತಿ ಸೌಕರ್ಯ ಮತ್ತು ವಾರ್ಡ್‌ಗಳ ಸೌಕರ್ಯ ಈಗಾಗಲೆ ಸಾಕಷ್ಟಿರುವುದು ಸರ್ಕಾರಕ್ಕೆ ತಿಳಿದಿದೆಯೆ;

ಇ) ಹಾಗಿದ್ದಲ್ಲಿ, ಸಾರ್ವಜನಿಕ ವಂತಿಗೆ ಇಲ್ಲದೇ ನೇರವಾಗಿ ಮಹಿಳಾ ವೈದ್ಯಾಧಿಕಾರಿಯ ಹುದ್ದೆಯನ್ನು ಅಲ್ಲಿಗೆ ಸರ್ಕಾರವು ಮಂಜೂರು ಮಾಡುವುದೆ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಬಂದಿದೆ.

ಆ) ಇಲ್ಲ

ಇ) ಜಿಲ್ಲಾ ಪರಿಷತ್ತು ತನ್ನ ಆಯವ್ಯಯದಲ್ಲಿ ಸೂಕ್ತ ಅನುದಾನ ಒದಗಿಸಿಕೊಂಡು ಪ್ರಸ್ತಾವನೆ ಕಳುಹಿಸಿದ ಕೂಡಲೇ ಪರಿಶೀಲಿಸಲಾಗುವುದು.

ನೆಲಮಂಗಲದಲ್ಲಿ ಸಂಚಾರಿ ಪೊಲೀಸ್ ಸಿಬ್ಬಂದಿ ನೇಮಕ

111 (690) ಶ್ರೀ ಆಂಜನಮೂರ್ತಿ (ನೆಲಮಂಗಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೆಲಮಂಗಲ ಟೌನ್ ಮುಖಾಂತರ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಅಪಘಾತಗಳನ್ನು ತಡೆಯಲು ಸರ್ಕಾರವು ಹೆಚ್ಚಿನ ಸಿಬ್ಬಂದಿ ಒದಗಿಸುವುದು ಹಾಗೂ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯುವ ಆಲೋಚನೆಯಿದೆಯೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಹೌದು.